# ಕಪ್ಪು ಕಪ್ಪು ಕಣ್ಕಪ್ಪು

ಚಂದ್ರನಿಗಿಟ್ಟರೆ ಕಣ್ಕಪ್ಪು
ಸೂರ್ಯಣ್ಣಂಗೆ ಬಲು ಸಿಟ್ಟು
ಅಕ್ಕನ ಹತ್ತಿರ ದೂರುತ್ತಾನೆ
ನಂಗೂ ಹಚ್ಚು ಒಂದಿಷ್ಟು

ಆಕಾಶದಲ್ಲಿ ಹಾರಾಡೋನೆ
ಮೋಡದ ಮರೇಲಿ ಓಡಾಡೋನೆ
ಚಂದ್ರನ ಕೂಡ ಜಗಳಾಡೋನೆ
ನಿಂಗ್ಯಾಕೋ ಕಣ್ಕಪ್ಪು?

ಅಮ್ಮ ನಗುತ ಕೇಳುತ್ತಾಳೆ
ಎದೆಗೆ ಅವಚಿ ಹಿಡ್ಕೋತಾಳೆ
ಮುತ್ತುಕೊಟ್ಟು ಮುದ್ದಿಸ್ತಾಳೆ
ಕೆನ್ನೆಗೆ ಗಲ್ಲಕೆ ಹಚ್ಚುತ್ತಾಳೆ

ಖುಷಿಯಾಗಿ ಹೋದ ಸೂರ್ಯಣ್ಣ
ಸುಮ್ಮನೆ ಬಾನಲಿ ಕೂರಲಿಲ್ಲ
ಡ್ಯೂಟಿ ಮುಗಿಸಿ ರಾತ್ರಿ ಇಳಿದ
ನಕ್ಷತ್ರಾನೂ ಕರಕೊಂಡು ಬಂದ

ನಂಗೆ ಮಾತ್ರ ಹಚ್ಚೋದು
ಯಾವ ಸೀಮೆ ನ್ಯಾಯ?

ಹಚ್ಚೋದಾದ್ರೆ ಇವಳಿಗೂ ಹಚ್ಚು
ಆಗಲೇ ಸಿಗೋದು ನ್ಯಾಯ

ಎಲ್ಲರನ್ನೂ ಕರೆದ ಅಮ್ಮ
ಮತ್ತೆ ಪಪ್ಪಿ ಕೊಟ್ಟಳು
ಕಣ್ಕಪ್ಪು ಇಡ್ತಾ ಇಡ್ತಾನೆ
ಲಾಲಿ ಹಾಡು ಹಾಡಿದಳು

**-ಡಿ.ಕೆ.ರಮೇಶ್**





## ನಿಮಗೆಷ್ಟು ಗೊತ್ತು?

## ಒಗಟುಗಳು

1) ಕಪ್ಪು ಹುಡುಗನಿಗೆ ಬಿಳಿ ಮುಂಡಾಸು.
2)ಬಿಳಿ ಕುದುರೆ ಬೇಲಿ ಹಾರುತ್ತೆ.
3)ಕಪ್ಪು ಅಮ್ಮನಿಗೆ ಬಿಳಿ ಮಗ.
4)ನಾನೆಟ್ಟ ಮರ ನನಗೇ ಹತ್ತೋಕೆ ಬರೊಲ್ಲ.
5)ಬಡವರ ಅಂಗಳದಲ್ಲಿ, ಶ್ರೀಮಂತರ ಜೇಬಲ್ಲಿ.
6)ಗುಡ್ಡದ ಹಿಂದೆ ಗುಂಡ್ಕಲ್ಲು.
7)ಹಾಲಿನ ಹೊಳೆಯಲ್ಲಿ ಬೆಂಕಿ ಗುಂಡುಗಳು.
8)ಬೆಳ್ಳಿ ಕೊಡೆ ತಿಪ್ಪೆನಾಗೆ ಬಿದ್ದೈತೆ.
9)ಚಿಕ್ಕ ಚಿಕ್ಕ ಪೆಟ್ಟಿಗೆ, ಮುಚ್ಚಿ ತೆರೆದರೆ ಮುನ್ನೂರು ಪೆಟ್ಟಿಗೆ.
10)ಹೂವರಳಿದ್ರೆ ನೆತ್ತಿ ಸುಡುತ್ತದೆ.
11)ತುಂಡು ಗೋಡೆ ಮೇಲೆ ಚಂದ್ರ ಕುಂತಾನೆ.
12)ಕರಿಯಣ್ಣ ಕರೆದಾಗ ಕೇರಿಯವರೆಲ್ಲ ನೆರೆದರು.

(ಸಂಗ್ರಹ)
**ಹೆಚ್.ಜಿ. ವೇದ, ಬೆಂಗಳೂರು**

ಉತ್ತರ: 1)ಒನಕೆ 2)ಬೂದಿ 3)ದೋಸೆ 4)ಬಾಳೆಮರ 5)ಸಿಂಬಳ 6)ತಾಂಬೂಲ 7)ಸಬ್ಬಕ್ಕಿ ಪಾಯಸ 8)ನಾಯಿಕೊಡೆ 9)ದಾಳಿಂಬೆ 10)ಸೂರ್ಯ 11)ಮೂಗುತಿ 12)ಕಾಗೆ